# ಅಫ್ಗಾನಿಸ್ತಾನ ಯಾಕಾಗಿ ಯುದ್ಧ?

**ಸಿರಿಯಾದಿಂದ ತನ್ನ ಪಡೆಗಳನ್ನು ಹಿಂಪಡೆದಿರುವ ಅಮೆರಿಕ ಇದೀಗ ಅಫ್ಗಾನಿಸ್ತಾನದಲ್ಲಿರುವ ಸೈನಿಕರನ್ನು ತವರಿಗೆ ಕರೆಸಿಕೊಳ್ಳಲು ನಿರ್ಧರಿಸಿದೆ. ಅಮೆರಿಕ ರಾಜಕಾರಣದ ಈ ಬಹುಚರ್ಚಿತ ವಿಷಯ ಅಫ್ಗಾನಿಸ್ತಾನದ ಭವಿಷ್ಯದ ಮೇಲೆ ಗಂಭೀರ ಪರಿಣಾಮ ಬೀರಬಲ್ಲದು.**

■ ಡಿ.ಎಂ. ಘನಶ್ಯಾಮ

‘ವಿಶ್ವ ಗೆಲ್ಲಲು ಹೊರಟ ಅಲೆಕ್ಸಾಂಡರ್ ಅಫ್ಗಾನಿಸ್ತಾನದ ಒಂದು ಹಿಡಿ ಮಣ್ಣನ್ನು ಗ್ರೀಕ್‌ನಲ್ಲಿದ್ದ ತನ್ನ ಅಮ್ಮನಿಗೆ ಕಳಿಸಿ, ಅರಮನೆಯ ಸುತ್ತ ಚೆಲ್ಲಲು ಹೇಳಿದ. ಅಫ್ಗನ್ ಮಣ್ಣು ಗ್ರೀಕ್ ನೆಲವನ್ನು ಸೋಕಿದ ತಕ್ಷಣವೇ ಅಲ್ಲಿ ಅಂತಃಕಲಹ ಆರಂಭವಾಯಿತು...’

—ಅಫ್ಗಾನಿಸ್ತಾನದ ಪರಿಸ್ಥಿತಿ ಮತ್ತು ಅಲ್ಲಿನ ಜನರ ಮನಸ್ಥಿತಿಯನ್ನು ಯೂರೋಪ್, ಅಮೆರಿಕದಂಥ ದೇಶಗಳು ಹೇಗೆ ನೋಡುತ್ತಿವೆ ಮತ್ತು ಅಫ್ಗಾನಿಗಳೆಲ್ಲರೂ ಯುದ್ಧಪಿಪಾಸುಗಳು ಎಂದು ಹೇಗೆ ಆಳವಾಗಿ ನಂಬಿವೆ ಎಂಬುದನ್ನು ಬಿಂಬಿಸುವ ಸೂತ್ರರೂಪಿ ಕಥೆ ಇದು.



2015ರಲ್ಲಿ ತೆರೆ ಕಂಡ ಇಂಗ್ಲಿಷ್ ಚಿತ್ರ ‘ಹೈನಾ ರೋಡ್’ನಲ್ಲಿಯೂ ಈ ಕಥೆ ಪ್ರಸ್ತಾಪವಾಗುತ್ತದೆ. ಅಫ್ಗಾನಿಸ್ತಾನದಲ್ಲಿ ಕೆನಡಾ ಸರ್ಕಾರ ಅನುಷ್ಠಾನಗೊಳಿಸಲು ಹೊರಟ ಹೆದ್ದಾರಿ ಕಾಮಗಾರಿಯನ್ನು ಕೇಂದ್ರವಾಗಿಸಿಕೊಂಡ ಈ ಚಿತ್ರವು ತಮ್ಮದಲ್ಲದ ಯುದ್ಧದಲ್ಲಿ ಜೀವತೆರಲು ನಿಂತಿರುವ ಸೈನಿಕರ ಬದುಕಿನ ಸೂಕ್ಷ್ಮ ವಿವರಗಳನ್ನು ಕಟ್ಟಿಕೊಡುವ ಪ್ರಯತ್ನ ಮಾಡುತ್ತಲೇ ವಾಸ್ತವಕ್ಕೆ ಕನ್ನಡಿ ಹಿಡಿಯುತ್ತದೆ. ಕೆಲ ದೃಶ್ಯಗಳಲ್ಲಿ ಸ್ಟೀರಿಯೊಟೈಪ್‌ಗಳನ್ನು ಮೀರಿ ಅಫ್ಗಾನಿಗಳ ಮಾನವೀಯ ನೆಲೆಯನ್ನೂ ಬಿಂಬಿಸುವಲ್ಲಿ ಯಶಸ್ವಿಯಾಗುತ್ತೆ.

ಈಗ ಈ ಚಿತ್ರ ನೆನಪಾಗಲೂ ಕಾರಣವಿದೆ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅಫ್ಗಾನಿಸ್ತಾನದಲ್ಲಿರುವ ಸೇನಾನೆಲೆಗೆ ನ.29ರಂದು ಹಠಾತ್ ಭೇಟಿ ನೀಡಿದ್ದರು. ಅಲ್ಲಿನ ಸೈನಿಕರಿಗೆ ಸ್ವತಃ ಊಟ ಬಡಿಸಿ, ‘ಅವರವರ ಯುದ್ಧ ಅವರವರು ಮಾಡಿಕೊಳ್ಳಬೇಕು. ಸಾಧ್ಯವಾದಷ್ಟೂ ಬೇಗ ನಮ್ಮ ಪಡೆಗಳು ಇಲ್ಲಿಂದ ಕಾಲ್ತೆಗೆಯಲಿವೆ’ ಎಂದು ಅಫ್ಗಾನಿಸ್ತಾನದ ಅಧ್ಯಕ್ಷ ಅಫ್ಗನ್ ಘನಿ ಎದುರೇ ಅಪ್ಪಣೆ ಕೊಡಿಸಿದರು. ‘ಐಎಸ್ ನಾಯಕ ಬಾಗ್ದಾದಿಯಂಥವನನ್ನು ಕೊಂದ ನೀವು ಪರಮಸಾಹಸಿ’ ಎಂದು ಟ್ರಂಪ್ ಸಾಹೇಬರ ಮುಖಸ್ತುತಿ ಮಾಡಿ ಘನಿ, ‘ಅಫ್ಗಾನಿ ಪಡೆಗಳು ಬಹುತೇಕ ಹೋರಾಟಗಳಲ್ಲಿ ಮುಂಚೂಣಿಯಲ್ಲಿವೆ. ಆದರೆ, ಇನ್ನು ಸ್ವಲ್ಪ ದಿನ ನಮಗೆ ನಿಮ್ಮ ಸಹಾಯ ಬೇಕಾಗಬಹುದು’ ಎಂದು ಅಂಗಲಾಚಿದ್ದರು.

ಸೈನಿಕರನ್ನು ಸ್ವದೇಶಕ್ಕೆ ಕರೆತರಬೇಕು ಎನ್ನುವ ಪ್ರಬಲ ಒತ್ತಡ ಇದೀಗ ಟ್ರಂಪ್ ಮೇಲಿದೆ. ಅಫ್ಗಾನಿಸ್ತಾನದಲ್ಲಿರುವ ಅಮೆರಿಕದ 24,000 ಸೈನಿಕರ ಸಂಖ್ಯೆಯನ್ನು 8,600ಕ್ಕೆ ಇಳಿಸಬೇಕೆಂಬುದು ಎಂದೋ ಹೊರಬಿದ್ದ ತೀರ್ಮಾನ. ಇದೇ ಲಯದಲ್ಲಿ ತಾಲೀಬಾನ್‌ನೊಂದಿಗೆ ಮಾತುಕತೆ ಆರಂಭಿಸಿದ್ದ ಅಮೆರಿಕ, ಕಾಬೂಲ್ ಬಾಂಬ್ ಸ್ಫೋಟದ (ಸೆ.6) ನೆಪದಲ್ಲಿ ಮುಖ ತಿರುಗಿಸಿತು. ಇದೀಗ ಮತ್ತೊಮ್ಮೆ ಟ್ರಂಪ್ ಅಫ್ಗನ್‌ಗೆ ಭೇಟಿ ನೀಡಿ ಮಾತುಕತೆ ಪುನರಾರಂಭಿಸುವ ಇಚ್ಛೆ ವ್ಯಕ್ತಪಡಿಸಿದ್ದಾರೆ.

ಒಂದೆಡೆ ಜಗತ್ತಿನ ಕಣ್ಣಿಗೆ ಕಾಣಿಸುವಂತೆ ಅಫ್ಗಾನಿಸ್ತಾನದ ಸರ್ಕಾರಿ ಪಡೆಗಳಿಗೆ ತರಬೇತಿಯೊಂದಿಗೆ ಶಸ್ತ್ರಾಸ್ತ್ರ ಒದಗಿಸುವ ಅಮೆರಿಕ, ಮತ್ತೊಂದೆಡೆ ತಾನು ಬಂಧಿಸಿದ್ದ ಮೂವರು ಹಿರಿಯ ತಾಲೀಬಾನ್ ನಾಯಕರನ್ನು ಬಿಡುಗಡೆ ಮಾಡಿದೆ. 2016ರಿಂದ ತಾಲೀಬಾನ್ ಒತ್ತೆ ಇರಿಸಿಕೊಂಡಿದ್ದ ಓರ್ವ ಅಮೆರಿಕ ಪ್ರಜೆ ಮತ್ತು ಅದರ ಮಿತ್ರ ರಾಷ್ಟ್ರ ಆಸ್ಟ್ರೇಲಿಯಾ ಪ್ರಜೆಯನ್ನು ಬಿಡಿಸಲು ಹೀಗೆ ಮಾಡಬೇಕಾಯಿತು ಎನ್ನುವುದು ಈ ಪ್ರಬಲ ರಾಷ್ಟ್ರ ನೀಡುವ ಸಬೂಬು.

ವಿದೇಶಿ ನೆಲದಲ್ಲಿ ಯುದ್ಧ ಬೇಡ ಎನ್ನುವ ಅಮೆರಿಕದ ಜನಸಾಮಾನ್ಯರ ಕೂಗು, ತಾಲೀಬಾನ್‌ನೊಂದಿಗೆ ಸ್ಥಗಿತಗೊಂಡಿದ್ದ ಮಾತುಕತೆ ಮತ್ತೆ ಆರಂಭಿಸಬೇಕಾದ ಒತ್ತಡ, ಹೆಚ್ಚುತ್ತಿರುವ ಐಸಿಸ್ (ಇಸ್ಲಾಮಿಕ್ ಪ್ರಭಾವ), ಸ್ವಾವಲಂಬಿಯಾಗದ ಅಫ್ಗಾನಿ ಸೇನೆ... ಈ ಎಲ್ಲ ಬೆಳವಣಿಗೆಗಳ ಹಿನ್ನೆಲೆಯಲ್ಲಿ ತಾಲೀಬಾನ್ ನಾಯಕರ ಬಿಡುಗಡೆಯನ್ನು ಯೋಚಿಸಿದರೆ ಬೇರೆಯದೇ ಅರ್ಥ ಹೊಳೆಯುತ್ತದೆ. 18 ವರ್ಷಗಳ ಸುದೀರ್ಘ ಯುದ್ಧದಲ್ಲಿ 2400 ಸೈನಿಕರನ್ನು ಬಲಿಕೊಟ್ಟಿರುವ ಅಮೆರಿಕಕ್ಕೆ ಗೆಲುವು ಇನ್ನೂ ಮರೀಚಿಕೆ.

ಹೌದಲ್ವಾ? ಭೂಮಿಗೆ ಮನುಷ್ಯ ಬಂದಾಗಿನಿಂದ ಇಲ್ಲಿಯವರೆಗೆ ಎಷ್ಟೆಲ್ಲಾ ಯುದ್ಧಗಳು ನಡೆದಿವೆ. ಯಾರಾದರೂ, ಎಂದಾದರೂ ನಿಜದ ಅರ್ಥದಲ್ಲಿ ಗೆದ್ದಿದ್ದು ಉಂಟೆ? ಸೋವಿಯತ್ ವಿರುದ್ಧ ತಾಲೀಬಾನಿ ಉಗ್ರರನ್ನು ಬೆಳೆಸಿದವರು ಯಾರು? ಅದೇ ಸಂಘಟನೆ ತಿರುಗಿಬಿದ್ದಾಗ ಮಟ್ಟಹಾಕುತ್ತೇವೆಂದು ಹೂಂಕರಿಸಿ ಅಫ್ಗಾನಿ ಬೆಟ್ಟಸಾಲಿನಲ್ಲಿ ಸೈನಿಕ ಶಿಬಿರ ಸ್ಥಾಪಿಸಿದವರು ಯಾರು?

‘ಎಲ್ಲ ಯುದ್ಧಗಳಿಗೂ ಕಣ್ಣಿಗೆ ಎದ್ದು ಕಾಣುವಂತೆ ರಾಜಕೀಯ ಕಾರಣಗಳೂ, ಅದರಡಿ ನಾಜೂಕಾಗಿ ಮುಚ್ಚಿಟ್ಟ ವ್ಯಾಪಾರಿ ಕಾರಣಗಳೂ ಇರುತ್ತವೆ. ಎಷ್ಟೋ ಯುದ್ಧಗಳನ್ನು ಸೋಲಲೆಂದೇ ಶುರುಮಾಡುತ್ತಾರೆ. ಅದು ಜಗತ್ತಿನ ಕಣ್ಣಿಗೆ ಕಾಣಿಸುವ ಸೋಲು. ಗೆದ್ದವರು ಯಾರು ಎಂಬುದು ಅರ್ಥವಾಗಬೇಕಾದವರಿಗೆ ಮಾತ್ರ ಅರ್ಥವಾಗಿರುತ್ತೆ’ ಎನ್ನುವ ಕರ್ನಾಟಕದವರೇ ಆದ ಭಾರತೀಯ ಸೇನೆಯ ನಿವೃತ್ತ ಲೆಫ್ಟಿನೆಂಟ್ ಜನರಲ್ ಒಬ್ಬರ ಅನುಭವದ ಮಾತನ್ನು ಇಡಿಯಾಗಿ ಅಮೆರಿಕದ ಅಫ್ಗನ್ ಸಾಹಸಕ್ಕೆ ಅನ್ವಯಿಸಬಹುದು.

ಅಸಹಾಯಕ ಅಪ್ಪನಿಂದ ಮಕ್ಕಳನ್ನು ಒತ್ತಾಯಪೂರ್ವಕ ಬೇರ್ಪಡಿಸುವ ಪ್ರಸಂಗವೊಂದು ‘ಹೈನಾ ರೋಡ್’ ಸಿನಿಮಾದಲ್ಲಿ ಬರುತ್ತೆ. ಇದನ್ನು ಕಂಡ ಕೈಲಿ ಬಂದೂಕು ಹಿಡಿದ ಸೈನಿಕರ ಮನಸ್ಸು ರೋಷದಿಂದ ಕುದಿಯುತ್ತಿರುತ್ತೆ. ಆದರೆ ‘ಏನೂ ಮಾಡಬೇಡಿ, ಸುಮ್ಮನಿರಿ’ ಎಂಬುದು ಮೇಲಧಿಕಾರಿಗಳ ಆಜ್ಞೆ. ‘ನಮ್ಮದಲ್ಲದ ಯುದ್ಧ, ನಮಗೆ ಅರ್ಥವಾಗದ ರಾಜಕಾರಣ, ನಾವು ಯಾರ ದಾಳಗಳು, ನಮ್ಮನ್ನು ಹೂಡಿ ಪಗಡೆ ಆಡುತ್ತಿರುವವರು ಯಾರು?’ ಸಿಟ್ಟಿಗೆದ್ದ ಸೈನಿಕರು ಆಗ ತಮ್ಮತಮ್ಮಲ್ಲಿ ಆಡಿಕೊಳ್ಳುವ ಮಾತುಗಳಿವು.

ಬಹುಶಃ ಅಫ್ಗಾನಿಸ್ತಾನದಲ್ಲಿರುವ ಅಮೆರಿಕ ಸೈನಿಕರಿಗೂ ಅವಕಾಶ ಸಿಕ್ಕರೆ ಇದೇ ಪ್ರಶ್ನೆಗಳನ್ನು ತಮ್ಮ ಅಧ್ಯಕ್ಷರಿಗೆ ಕೇಳಬೇಕು ಎನ್ನಿಸಿರಬಹುದು. ■